# ಮೋದಿಗೆ ರಾಷ್ಟ್ರಪತಿ ಆಹ್ವಾನ

## ಪ್ರಮಾಣವಚನ ಸ್ವೀಕಾರ ದಿನಾಂಕ ತಿಳಿಸಿ, ಸಚಿವರ ಪಟ್ಟಿ ನೀಡಲು ಸೂಚನೆ

**ನವದೆಹಲಿ:** ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ನರೇಂದ್ರ ಮೋದಿ ಅವರನ್ನು ಪ್ರಧಾನಮಂತ್ರಿಯಾಗಿ ಶನಿವಾರ ಸಂಜೆ ನಿಯುಕ್ತಿಗೊಳಿಸಿದರು.

ನರೇಂದ್ರ ಮೋದಿಯವರನ್ನು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ (ಎನ್‌ಡಿಎ) ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆಮಾಡಿದ ಬಳಿಕ 40 ನಾಯಕರನ್ನೊಳಗೊಂಡ ಮೈತ್ರಿಕೂಟದ ನಿಯೋಗವೊಂದು ರಾಷ್ಟ್ರಪತಿಯವರನ್ನು ಭೇಟಿ ಮಾಡಿ ಸರಕಾರ ರಚನೆಯ ಹಕ್ಕು ಮಂಡಿಸಿದ ಬಳಿಕ ಅವರು ಈ ನಿರ್ಧಾರ ಕೈಗೊಂಡಿದ್ದಾರೆ.

ತಾವು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಳ್ಳುವ ದಿನಾಂಕ ಹಾಗೂ ಮಂತ್ರಿಮಂಡಳದ ಪಟ್ಟಿಯನ್ನು ಸಲ್ಲಿಸುವಂತೆ ಮೋದಿಯವರಿಗೆ ಸೂಚಿಸಿರುವುದಾಗಿ ರಾಷ್ಟ್ರಪತಿ ಕಚೇರಿಯ ಟ್ವೀಟ್‌ನಲ್ಲಿ ತಿಳಿಸಲಾಗಿದೆ.

ತಾವು ಅಧಿಕಾರ ವಹಿಸಿಕೊಂಡ ಕ್ಷಣವೇ ತಮ್ಮ ಸರಕಾರ ಕಾರ್ಯಪ್ರವೃತ್ತರಾಗುವುದಾಗಿ ರಾಷ್ಟ್ರಪತಿ ಭವನದ ಮುಂಭಾಗದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತ ಮೋದಿ ತಿಳಿಸಿದರು.

'ಪ್ರಧಾನಿಯಾಗಿ ನಿಯುಕ್ತಿಗೊಳಿಸಿದ ಪತ್ರವನ್ನು ರಾಷ್ಟ್ರಪತಿಯವರು ನನಗೆ ನೀಡಿದ್ದಾರೆ. ದೇಶವು ನನಗೆ ಬಹುದೊಡ್ಡ ಜನಾದೇಶವನ್ನು ನೀಡಿದೆ.ಈ ಜನಾದೇಶದಲ್ಲಿ ನಿರೀಕ್ಷೆಗಳ ಮೂಟೆಯೇ ಇದೆ' ಎಂದು ಅವರು ವಿವರಿಸಿದರು.

ಗುಜರಾತಿಗೆ ಮುಂದಿನವಾರ ಭೇಟಿ ನೀಡಿ ತಮ್ಮ ತಾಯಿಯವರ ಆಶೀರ್ವಾದ ಪಡೆಯಲಿರುವ ಮೋದಿಯವರು ಬಳಿಕ ಸ್ವಕ್ಷೇತ್ರ ವಾರಾಣಸಿಗೆ ತೆರಳಿ ಮತದಾರರಿಗೆ ಕೃತಜ್ಞತೆ ಅರ್ಪಿಸಲಿದ್ದಾರೆ.ಅನಂತರ ಮತ್ತೊಂದು ಅವಧಿಗೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ. ಇದಕ್ಕೆ ಮುನ್ನ ರಾಷ್ಟ್ರಪತಿ ಕೋವಿಂದ್ ಅವರು ಕೇಂದ್ರ ಸಂಪುಟದ ಶಿಫಾರಸಿನ ಮೇರೆಗೆ 16 ನೆ ಲೋಕಸಭೆಯನ್ನು ವಿಸರ್ಜಿಸಿದರು.

ಇದಕ್ಕೆ ಮೊದಲು ನಡೆದ, ನೂತನವಾಗಿ ಆಯ್ಕೆಯಾದ






ಎನ್‌ಡಿಎ ಸಂಸತ್ ಸದಸ್ಯರ ಸಭೆಯಲ್ಲಿ ನರೇಂದ್ರ ಮೋದಿಯವರನ್ನು ಎನ್‌ಡಿಎ ಸಮಸದೀಯ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆಮಾಡಲಾಯಿತು..